**ದಿನಾಂಕಃ 23-09-2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದಃ**

4. ನನ್ನ ವಿರುದ್ಧ ಇಲ್ಲಿಯವರೆಗೆ ಯಾವುದೇ ಕ್ರಿಮಿನಲ್ ಕೇಸು ಆಗಿರುವುದಿಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳಿದರೆ ಏನಾಗುತ್ತದೆ ಎಂದು ನನಗೆ ಗೊತ್ತು . ಕುಮಟಾ ಠಾಣೆಯ ಗುನ್ನಾ ಸಂ. 96/2017 ರಲ್ಲಿ ನನ್ನ ವಿರುದ್ಧ ಪ್ರಕರಣ ದಾಖಲಾಗಿತ್ತು ಆದರೆ ಈಗ ಅದು ಬಾಕಿ ಇರುವುದಿಲ್ಲ. ದಿನಾಂಕ 19.04.2017 ರಂದು ಬೆಳಿಗ್ಗೆ 11.30 ಗಂಟೆ ಸುಮಾರಿಗೆ ಸರ್ಕಾರವು ಶಾಲಾ ಮಕ್ಕಳ ಉಪಯೋಗಕ್ಕಾಗಿ ನೀಡಿದ ಸುಮಾರು 15 ಕಿ.ಗ್ರಾಂ ಆಗುವಷ್ಟು ಹಾಲಿನ ಪೌಡರನ್ನು ಅಕ್ರಮವಾಗಿ ಮಾರಾಟ ಮಾಡುವ ಉದ್ದೇಶದಿಂದ ತಂದು ಅದನ್ನು ಕುಮಟಾದ ರಥ ಬೀದಿಯ ಜೆ.ಎನ್. ಶಾನಭಾಗ್ ರವರ ಬಾಗಿಲು ಮುಚ್ಚಿದ್ದ ಅಂಗಡಿಯ ಎದುರಿನ ಸಿಮೆಂಟಿನ ಕಟ್ಟೆಯ ಮೇಲೆ ತಂದಿಟ್ಟು ಮೋಸ ಮಾಡಿದ ಬಗ್ಗೆ ಆ ದೂರು ದಾಖಲಾಗಿದೆ ಎಂದರೆ ಹೌದು ಆದರೆ ನನ್ನ ವಿರುದ್ಧ ಅದು ದಾಖಲಾಗಿರುವುದಿಲ್ಲ. ರಾಮಾ ಬೀರಪ್ಪ ನಾಯ್ಕ , ಸಾಃ ಬಾಡಾ ಕುಮಟಾ ಎಂದರೆ ನಾನೇ ಆಗಿದ್ದೇನೆ. ನಮ್ಮ ಊರಿನಲ್ಲಿ ಶಾಲಾ ಬಾಲಕರಿಗೆ ಹಾಲಿನ ಪುಡಿ ಸರಬರಾಜು ಮಾಡುವ ಬೇರೆ ವ್ಯಕ್ತಿಗಳು ಇದ್ದಾರೆ. ಅವರ ಹೆಸರು ನನಗೆ ಗೊತ್ತಿಲ್ಲ. 2017 ರಲ್ಲಿ ನಮ್ಮ ಊರಿನಲ್ಲಿ ಹಾಲಿನ ಪುಡಿ ಸರಬರಾಜು ಮಾಡುತ್ತಿದ್ದ ರಾಮಾ ಬೀರಪ್ಪ ನಾಯ್ಕ ನಾನು ಒಬ್ಬನೇ ಆಗಿರುತ್ತೇನೆ. ದಿನಾಂಕ 20.04.2017 ರ ಪ್ರಕರಣಕ್ಕೆ ಸಂಬಂಧಪಟ್ಟಂತೆ ನನ್ನನ್ನು ಕುಮಟಾ ಠಾಣೆಗೆ ಪೊಲೀಸ್ ನವರು ಕರೆಸಿರುವುದಿಲ್ಲ. ಆದರೆ ನನ್ನ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಹೇಳಿದ್ದರು. ಈಗ ತೋರಿಸಿದ ಫಿರ್ಯಾದಿನ ದೃಢೀಕೃತ ನಕಲು ಮತ್ತು ಪ್ರಥಮ ವರ್ತಮಾನ ವರದಿ ನನ್ನ ವಿರುದ್ಧ ದಾಖಲಾಗಿದೆ ಎಂದರೆ ಹೌದು . ಸದರಿ ಪ್ರಥಮ ವರ್ತಮಾನ ವರದಿ ಮತ್ತು ದೂರಿನ ದೃಢೀಕೃತ ನಕಲನ್ನು ಒಟ್ಟಾರೆಯಾಗಿ ನಿ.ಡಿ. 1 ಎಂದು ಗುರುತಿಸಲಾಯಿತು. ನಾನು ಪದವಿ ಓದಿದ್ದೇನೆ. ಕನ್ನಡ ಮಾಧ್ಯಮದಲ್ಲಿ ಓದಿದ್ದೇನೆ. ನಾನು ಕನ್ನಡ ಪತ್ರಿಕೆಗಳನ್ನು ಓದುತ್ತೇನೆ. ದಿನಾಂಕ 20.04.2017 ರಂದು ಉದಯವಾಣಿ ಪತ್ರಿಕೆಯಲ್ಲಿ " ಕ್ಷೀರ ಭಾಗ್ಯ ಪುಡಿ ಮಾರಲೆತ್ನ ಅಕ್ರಮ ಬಹಿರಂಗಗೊಳ್ಳುವ ಹೆದರಿಕೆಯಿಂದ ನಾಪತ್ತೆಯಾದ ರಾಮ " ಎಂದು ನನ್ನ ವಿರುದ್ಧ ಲೇಖನ ಪ್ರಕಟವಾಯಿತು ಎಂದರೆ ನಾನು ಅದನ್ನು ನೋಡಿರುವುದಿಲ್ಲ. ಸಾಕ್ಷಿಗೆ ಆ ಪತ್ರಿಕೆಯನ್ನು ತೋರಿಸಲಾಗಿದೆ ಆದರೆ ಸಾಕ್ಷಿ

ಒಪ್ಪಿರುವುದಿಲ್ಲ. ಕ್ಷೀರ ಭಾಗ್ಯ ಹಾಲಿನ ಪುಡಿ ಅಕ್ರಮವಾಗಿ ಮಾರಾಟ ಮಾಡಿದ ಬಗ್ಗೆ ಪೊಲೀಸ್ ಪ್ರಕರಣ ದಾಖಲಾದ ನಂತರ ಪತ್ರಿಕೆಯಲ್ಲಿ ಆ ಬಗ್ಗೆ ಬಂದ ವಿಚಾರ ನನಗೆ ಗೊತ್ತು . ಯಾವ ಯಾವ ಪತ್ರಿಕೆಯಲ್ಲಿ ಬಂತು ಎಂದು ನನಗೆ ಗೊತ್ತಿಲ್ಲ. ನನಗೆ ಯಾರೋ ಹೇಳಿದ್ದರಿಂದ ಗೊತ್ತಾಗಿರುತ್ತದೆ . ಈಗ ತೋರಿಸಿದ ಉದಯವಾಣಿ ಪತ್ರಿಕೆ ದಿನಾಂಕ 20.04.2017 ರ 4 ನೇ ಪುಟದಲ್ಲಿ " ಕ್ಷೀರ ಭಾಗ್ಯ ಪುಡಿ ಮಾರಲೆತ್ನ ಅಕ್ರಮ ಬಹಿರಂಗಗೊಳ್ಳುವ ಹೆದರಿಕೆಯಿಂದ ನಾಪತ್ತೆಯಾದ ರಾಮ " ಎಂಬ ಶೀರ್ಷಿಕೆಯಡಿಯಲ್ಲಿ ಬರೆದಿರುವ ಲೇಖನವನ್ನು ಈಗ ನಾನು ಓದಿದ್ದು ಅದನ್ನು ನನ್ನ ವಿರುದ್ಧ ಬರೆಯಲಾಗಿದೆ . ಸಾಕ್ಷಿ ಒಪ್ಪಿದ್ದರಿಂದ ಆ ಪತ್ರಿಕೆಯನ್ನು ನಿ.ಡಿ. 2 ಎಂದು ಹಾಗೂ 4 ನೇ ಪುಟದಲ್ಲಿ ಸಂಬಂಧಪಟ್ಟ ಭಾಗವನ್ನು ನಿ.ಡಿ.2(ಎ) ಎಂದು ಗುರುತಿಸಲಾಯಿತು. ಕುಮಟಾದಲ್ಲಿ ಕನ್ನಡ ಜನಾಂತರಂಗ ಎಂಬ ಪತ್ರಿಕೆ ಬಹಳ ವಿತರಣೆಯಲ್ಲಿ ಇದೆ ಎಂದರೆ ಹೌದು . 2017 ರಲ್ಲಿ ಈಗ ತೋರಿಸಿದ ಆ ಪತ್ರಿಕೆಯಲ್ಲಿ ಇರುವ ಭಾವ ಚಿತ್ರದ ಪ್ರಕಾರ ನಾನು ಇದ್ದೆ ಅದು ನನ್ನ ಭಾವ ಚಿತ್ರ ಆಗಿದೆ ಎಂದರೆ ಸರಿಯಲ್ಲ. ಅದು ನನ್ನ ಭಾವ ಚಿತ್ರ ಅಲ್ಲ. ಈಗ ತೋರಿಸಿದ ದಿನಾಂಕ 20.04.2017 ರ ಕನ್ನಡ ಜನಾಂತರಂಗ ಪತ್ರಿಕೆಯಲ್ಲಿ "ಕಾಳಸಂತೆ ಪಾಲಾಗುತ್ತಿರುವ ಕ್ಷೀರಭಾಗ್ಯ ಯೋಜನೆಯ ಹಾಲಿನ ಪುಡಿ " ಲೇಖನ ನನ್ನ ಕುರಿತು ಬಂದಿದೆ ಎಂದರೆ ಹೌದು ಆದರೆ ಅದು ಸುಳ್ಳು ಲೇಖನ ಆಗಿದೆ . ಸದರಿ ಪತ್ರಿಕೆಯನ್ನು ನಿ.ಡಿ. 3 ಎಂದು ಅದರಲ್ಲಿ ಪುಟ ಸಂ. 1 ರಲ್ಲಿ ಸಂಬಂಧಪಟ್ಟ ಲೇಖನವನ್ನು ನಿ.ಡಿ. 3(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ದಿನಾಂಕ 20.04.2017 ರ ವಿಜಯವಾಣಿ ಪತ್ರಿಕೆಯಲ್ಲಿ "ಅಕ್ರಮವಾಗಿ ಹಾಲಿನ ಪುಡಿ ಮಾರಾಟಕ್ಕೆ ಯತ್ನ " ಲೇಖನ ನನ್ನ ಕುರಿತು ಬಂದಿದೆ ಎಂದರೆ ಹೌದು ಆದರೆ ಅದು ಸುಳ್ಳು ಲೇಖನ ಆಗಿದೆ . ಸದರಿ ಪತ್ರಿಕೆಯನ್ನು ನಿ.ಡಿ. 4 ಎಂದು ಅದರಲ್ಲಿ ಪುಟ ಸಂ. 12 ರಲ್ಲಿ ಸಂಬಂಧಪಟ್ಟ ಲೇಖನವನ್ನು ನಿ.ಡಿ. 4(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ದಿನಾಂಕ 20.04.2017 ರ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ "ಕ್ಷೀರಭಾಗ್ಯದ ಹಾಲಿನ ಪುಡಿ ಮಾರಾಟಃ ಸ್ಥಳೀಯರಿಂದ ದಾಳಿ " ಲೇಖನ ನನ್ನ ಕುರಿತು ಬಂದಿದೆ ಎಂದರೆ ಹೌದು ಆದರೆ ಅದು ಸುಳ್ಳು ಲೇಖನ ಆಗಿದೆ . ಸದರಿ ಪತ್ರಿಕೆಯನ್ನು ನಿ.ಡಿ. 5 ಎಂದು ಅದರಲ್ಲಿ ಪುಟ ಸಂ. 5 ರಲ್ಲಿ ಸಂಬಂಧಪಟ್ಟ ಲೇಖನವನ್ನು ನಿ.ಡಿ. 5(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ದಿನಾಂಕ 20.04.2017 ರ ಕರಾವಳಿ ಮುಂಜಾವು ಪತ್ರಿಕೆಯಲ್ಲಿ "ಶಾಲಾ ಮಕ್ಕಳ ಹಾಲುಪುಡಿ ಖಾಸಗಿ ಅಂಗಡಿಗೆ ಮಾರಾಟ" ಲೇಖನ ನನ್ನ ಕುರಿತು

ಬಂದಿದೆ ಎಂದರೆ ಹೌದು ಆದರೆ ಅದು ಸುಳ್ಳು ಲೇಖನ ಆಗಿದೆ . ಸದರಿ ಪತ್ರಿಕೆಯನ್ನು ನಿ.ಡಿ. 6 ಎಂದು ಅದರಲ್ಲಿ ಪುಟ ಸಂ. 3 ರಲ್ಲಿ ಸಂಬಂಧಪಟ್ಟ ಲೇಖನವನ್ನು ನಿ.ಡಿ. 6(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ದಿನಾಂಕ 15.10.2013 ರ ಅಘನಾಶಿನಿ ಪತ್ರಿಕೆಯಲ್ಲಿ "ಕ್ಷೀರಭಾಗ್ಯ ಯೋಜನೆಯಲ್ಲಿ ಭಾರೀ ಗೋಲ್ ಮಾಲ್? ಗುತ್ತಿಗೆದಾರನ ಸುತ್ತ ಅನುಮಾನದ ಹುತ್ತ! " ಲೇಖನ ನನ್ನ ಕುರಿತು ಬಂದಿದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ಪತ್ರಿಕೆಯನ್ನು ತೋರಿಸಿದ್ದು ಸಾಕ್ಷಿ ಅದನ್ನು ಒಪ್ಪಿರುವುದಿಲ್ಲ.

5. ನನ್ನ ವಿರುದ್ಧ ಹಾಲಿನ ಪುಡಿ ದುರುಪಯೋಗ ಮಾಡಿಕೊಂಡಿದ್ದೇನೆ ಎಂದು ದಾಖಲಾದ ಪ್ರಕರಣದಲ್ಲಿ ನಾನು ನಿರೀಕ್ಷಣಾ ಜಾಮೀನು ಪಡೆದಿದ್ದೆ ಎಂದರೆ ಹೌದು . ನನ್ನನ್ನು ಬಂಧಿಸಬಹುದು ಎಂಬ ಭಯದಿಂದ ನಾನು ನಿರೀಕ್ಷಣಾ ಜಾಮೀನು ಪಡೆದಿದ್ದೆ ಎಂದರೆ ಸರಿಯಲ್ಲ. ಅದು ಸುಳ್ಳು ಪ್ರಕರಣ ಆಗಿತ್ತು ನಾನು ನಿರೀಕ್ಷಣಾ ಜಾಮೀನು ಪಡೆದೆ. ನನ್ನ ವಿರುದ್ಧ ಪತ್ರಿಕೆಗಳಲ್ಲಿ ವರದಿಯಾದ ಬಗ್ಗೆ ಆ ಪತ್ರಿಕೆಗಳವರ ಮೇಲೆ ನಾನು ಕ್ರಮ ತೆಗೆದುಕೊಂಡಿಲ್ಲ . ನನ್ನ ವಿರುದ್ಧ ಪ್ರಕರಣ ದಾಖಲಾದ ಬಗ್ಗೆ ದೂರುದಾರರ ವಿರುದ್ಧ ನಾನು ಕ್ರಮ ತೆಗೆದುಕೊಂಡಿಲ್ಲ. ಆದರೆ ಅದಕ್ಕೆ ಮೊದಲೇ ನಾನು 2013 ರಲ್ಲಿ ಈ ಪ್ರಕರಣವನ್ನು ದಾಖಲಿಸಿದ್ದೆ . ಅದರ ದ್ವೇಷದ ಕಾರಣ ನನ್ನ ವಿರುದ್ಧ 2017 ರಲ್ಲಿ ಸುಳ್ಳು ಪ್ರಕರಣವನ್ನು ದಾಖಲು ಮಾಡಿದರು ಎಂದು ಸಾಕ್ಷಿ ಸ್ವತಃ ನುಡಿಯುವರು . 2013 ರಲ್ಲಿ ನಾನು ಈ ಪ್ರಕರಣವನ್ನು ದಾಖಲು ಮಾಡಿದ್ದರಿಂದ 2017 ರಲ್ಲಿ ನನ್ನ ವಿರುದ್ಧ ಸುಳ್ಳು ಪ್ರಕರಣ ಮಾಡಿದ್ದಾರೆ ಎಂದು ನಾನು ಪೊಲೀಸ್ ನವರಿಗೆ ದಾಖಲಾತಿಗಳನ್ನು ಕೊಟ್ಟಿದ್ದೇನೆ. ಪೊಲೀಸ್ ನವರಿಗೆ ಕೊಟ್ಟ ದಾಖಲಾತಿಗಳನ್ನು ನಾನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಲು ಸಾಧ್ಯವೇ ಎಂದರೆ ನಾನು ಕುಮಟಾ ಪೊಲೀಸ್ ನವರಿಗೆ ಆ ವಿಷಯವನ್ನು ಹೇಳಿರುತ್ತೇನೆ ದಾಖಲಾತಿಯನ್ನು ಪೊಲೀಸ್ ನವರಿಗೆ ಒದಗಿಸಿದ್ದೇನಾ ಎಂದು ನೆನಪಿಲ್ಲ ಕಾರಣ ನನಗೆ ಪಾರ್ಶ್ವವಾಯು ಆದ ಮೇಲೆ ನೆನಪಿನ ಶಕ್ತಿ ಸ್ವಲ್ಪ ಕಡಿಮೆಯಾಗಿದೆ.

6. ಕ್ಷೀರ ಭಾಗ್ಯ ಯೋಜನೆ ಆಗಸ್ಟ್ 2013 ರಲ್ಲಿ ಪ್ರಾರಂಭವಾಯಿತು ಎಂದರೆ ಹೌದು . ನಾನು ದಿನಾಂಕ 16.09.2013 ರಲ್ಲಿ ಈ ಪ್ರಕರಣದ ದೂರನ್ನು ಸಲ್ಲಿಸಿದಾಗ ಕೆ ಎಂ ಎಫ್ ನವರು ಅಥವಾ ಸರ್ಕಾರದವರು ಹಾಲಿನ ಪುಡಿ ಸಾಗಾಣಿಕಾ ಆದೇಶವನ್ನು ಹೊರಡಿಸಿತ್ತಾ

ಎಂದರೆ ಆದೇಶ ಇತ್ತು. ಆ ಆದೇಶದ ಪ್ರತಿಯನ್ನು ನಾನು ಲೋಕಾಯುಕ್ತ ಪೊಲೀಸ್ ನವರಿಗೆ ಕೊಟ್ಟಿದ್ದೇನೆ. ಅದನ್ನು ಲೋಕಾಯುಕ್ತ ಪೊಲೀಸ್ ನವರಿಗೆ ನಾನು ಕೊಟ್ಟ ಬಗ್ಗೆ ಪಂಚನಾಮೆ ಮಾಡಿದ್ದಾರಾ ಎಂದು ನೆನಪಿಲ್ಲ. ದಿನಾಂಕ 25.09.2013 ರಂದು ಹಾಲಿನ ಪುಡಿ ಸಾಗಾಣಿಕೆ ಆದೇಶ ನನಗೆ ಅಧಿಕೃತವಾಗಿ ಬಂದಿದೆ ಎಂದರೆ ಹೌದು ಮೊದಲು ಬಾಯಿ ಮಾತಿನಲ್ಲಿ ಹೇಳಿದ್ದರು ಎಂದು ಸಾಕ್ಷಿ ನುಡಿಯುವರು. ಬಿಸಿ ಊಟ ಆಹಾರ ಸರಬರಾಜು ಮಾಡುವವರೇ ಹಾಲಿನ ಪುಡಿ ಸಾಗಾಣಿಕೆ ಮಾಡಬಹುದು ಎಂದು ಮೌಖಿಕವಾಗಿ ಆಹಾರ ಧಾನ್ಯ ಸರಬರಾಜು ಮಾಡುವ ಇಲಾಖೆಯ ಅಕ್ಷರ ದಾಸೋಹ ಅಧಿಕಾರಿಗಳು ಹೇಳಿದ್ದರು. ನನಗೆ ಆ ಅಧಿಕಾರಿ ಹೆಸರು ಈಗ ನೆನಪಿಲ್ಲ. ಆ ಅಧಿಕಾರಿಯನ್ನು ಕರೆತಂದು ಸಾಕ್ಷಿಯನ್ನಾಗಿ ವಿಚಾರಣೆ ಮಾಡಲು ಸಾಧ್ಯವಿಲ್ಲ. ಲೋಕಾಯುಕ್ತ ಪೊಲೀಸ್ ನವರಿಗೆ ಕೆ ಎಂ ಎಫ್ ರವರು ಮೌಖಿಕವಾಗಿ ಆದೇಶ ನೀಡಿದ್ದಾರೆ ಎಂದು ನಾನು ತಿಳಿಸಿರುತ್ತೇನೆ. ಕೆ ಎಂ ಎಫ್ ಸಂಸ್ಥೆಯವರು ಮೌಖಿಕವಾಗಿ ಆದೇಶ ನೀಡಿದ ದಿನಾಂಕ ನನಗೆ ನೆನಪಿಲ್ಲ. ಲೋಕೋಪಯೋಗಿ ಇಲಾಖೆಯಲ್ಲಿ ಗುತ್ತಿಗೆ ಕೆಲಸ ಮಾಡಲು ಪರವಾನಗಿ ಪಡೆಯಲು ಅವಶ್ಯಕತೆ ಇರುವಂತೆ ಕೆ ಎಂ ಎಫ್ ನಲ್ಲಿ ಸರಬರಾಜು ಮಾಡಲು ಸಹ ಆ ಸಂಸ್ಥೆಯಿಂದ ಪರವಾನಗಿ ಪಡೆಯಬೇಕಾಗಿರುತ್ತದೆ ಎಂದರೆ ಹೌದು . ಈ ಪ್ರಕರಣ ದಾಖಲು ಮಾಡುವಾಗ ಕೆ ಎಂ ಎಫ್ ಸಂಸ್ಥೆಯಿಂದ ಅವರ ಸರಕು ಸಾಗಣೆ ಮಾಡಲು ನಾನು ಪರವಾನಗಿ ಪಡೆದಿದ್ದೆನಾ ಎಂದರೆ ಸರ್ಕಾರದವರ ಹೊಸ ಯೋಜನೆ ಆದಕಾರಣ ಒಂದು ಬಾರಿ ಸರಬರಾಜು ಮಾಡಿ ಎಂದು ಹೇಳಿದರು ಆ ಪ್ರಕಾರವಾಗಿ ನಾನು ಸರಬರಾಜು ಮಾಡಿರುತ್ತೇನೆ. ಕೆ ಎಂ ಎಫ್ ಸಂಸ್ಥೆ ಸರ್ಕಾರ ಅಲ್ಲ ಎಂದರೆ ಸರ್ಕಾರದವರು ಕೆ ಎಂ ಎಫ್ ಸಂಸ್ಥೆಗೆ ಹೇಳಿದ್ದರು ಅದೇ ಪ್ರಕಾರ ನಾನು ಸರಬರಾಜು ಮಾಡಿರುತ್ತೇನೆ. ಸರ್ಕಾರದವರು ಕೆ ಎಂ ಎಫ್ ಗೆ ಹೇಳಿದ ಬಗ್ಗೆ ಆದೇಶದ ಪ್ರತಿ ನನ್ನ ಬಳಿ ಇಲ್ಲ. ಸರ್ಕಾರದವರು ಕೆ ಎಂ ಎಫ್ ರವರಿಗೆ ಹೇಳಿದ ಬಗ್ಗೆ ಲೋಕಾಯುಕ್ತ ಪೊಲೀಸ್ ನವರಿಗೆ ನಾನು ದಾಖಲಾತಿಯನ್ನು ನೀಡಿಲ್ಲ. ಬಿಸಿಯೂಟ ಆಹಾರ ಪದಾರ್ಥ ಸಾಗಣೆ ಪರವಾನಗಿ ನನ್ನ ಬಳಿ 2010, 2011, 2012 ರಲ್ಲಿ ಇತ್ತು . ಆ ಯೋಜನೆ 2002 ರಲ್ಲಿ ಬಂತು ಆಗಿನಿಂದ ನನಗೆ ಸದರಿ ಪರವಾನಗಿ ಇತ್ತು . ದಿನಾಂ ಕ 16.09.2013 ರಂದು ನಾನು ಈ ಪ್ರಕರಣ ಫಿರ್ಯಾದು ನೀಡಿದಾಗ ನನ್ನ ಬಳಿ ಬಿಸಿಯೂಟದ ಸಾಮಗ್ರಿಗಳನ್ನು ಸರಬರಾಜು ಮಾಡಲು ಪರವಾನಗಿ ಇರಲಿಲ್ಲ ಎಂದರೆ 2012 ರವರೆಗೆ ನನ್ನ ಬಳಿ ಪರವಾನಗಿ ಇತ್ತು . 2013 ರಲ್ಲಿ ನನ್ನ ಬಳಿ ಪರವಾನಗಿ ಇರಲಿಲ್ಲ ಈ ಆರೋಪಿಯೇ ಆ ಪರವಾನಗಿ

ಸಿಗುವುದನ್ನು ತಪ್ಪಿಸಿದರು . ಆರೋಪಿ ನನಗೆ ಬಿಸಿಯೂಟ ಪರವಾನಗಿ ಸಿಗುವುದನ್ನು ತಪ್ಪಿಸಿದ ಬಗ್ಗೆ ನಾನು ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ನಾನು ಈ ವಿಷಯವನ್ನು ಲೋಕಾಯುಕ್ತ ಪೊಲೀಸ್ ನವರಿಗೆ ಹೇಳಿದ್ದೇನೆ. ಈ ಫಿರ್ಯಾದನ್ನು ಕೊಡುವುದಕ್ಕೆ ಮೊದಲು ಆರೋಪಿಯನ್ನು ಕಂಡರೆ ನನಗೆ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಪರವಾನಗಿಯನ್ನು ತಪ್ಪಿಸಿದ್ದರಿಂದ ಆರೋಪಿ ವಿರುದ್ಧ ದ್ವೇಷ ಇರಲಿಲ್ಲವೇ ಎಂದರೆ ನನಗೆ ಅದರಿಂದ ನೋವು ಆಗಿತ್ತು . ದಿನಾಂಕ 25.09.2013 ಕ್ಕೆ ನನ್ನ ಹೆಸರಿನಲ್ಲಿ ಹಾಲಿನ ಪುಡಿ ಸರಬರಾಜು ಮಾಡುವ ಆದೇಶ ಬಂದಿದ್ದು ಅದು ಅಕ್ಷರ ದಾಸೋಹ ವಿಭಾಗಕ್ಕೆ ತಲುಪಿದ್ದು ದಿನಾಂಕ 30.09.2013 ರಂದು ಎಂದರೆ ಅದೇ ತಿಂಗಳಿನಲ್ಲಿ ಬಂದಿದೆ ಆದರೆ ಹೊಸ ಯೋಜನೆ ಆದಕಾರಣ ಸರಬರಾಜು ಮಾಡುವುದು ವಿಳಂಬ ಆಗಬಾರದು ಎಂದು ನನಗೆ ಸರಬರಾಜು ಮಾಡಲು ಕೆ ಎಂ ಎಫ್ ರವರು ಹೇಳಿದರು ನಂತರ ಆದೇಶ ಕೊಟ್ಟರು . ಸರ್ಕಾರ ಅಥವಾ ಸರ್ಕಾರದ ಸಂಸ್ಥೆ ಯಾವುದೇ ಸಾಮಗ್ರಿಯನ್ನು ಪೂರೈಕೆಯನ್ನು ಗುತ್ತಿಗೆದಾರರ ಮೂಲಕ ಮಾಡಬೇಕಾದರೆ ಆ ಬಗ್ಗೆ ಟೆಂಡರ್ ಕರೆದೇ ಮಾಡುತ್ತಾರೆ ಎಂದರೆ ಹೌದು . ದಿನಾಂಕ 30.09.2013 ಕ್ಕೆ ಮೊದಲು ನನಗೆ ಶಾಲೆಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವ ಲಿಖಿತ ಆದೇಶ ಇರಲಿಲ್ಲ ಎಂದರೆ ಅದೇ ತಿಂಗಳಿನಲ್ಲಿ ಆದೇಶ ಕೊಟ್ಟಿದ್ದಾರೆ. ಆ ದಿನಾಂಕಕ್ಕೆ ಮೊದಲು ನನಗೆ ಲಿಖಿತ ಆದೇಶ ಕೊಟ್ಟಿರಲಿಲ್ಲ ಎಂದರೆ ಯೋಜನೆ ಹೊಸದಾದ್ದರಿಂದ ನನಗೆ ಸರಬರಾಜು ಮಾಡಲು ಹೇಳಿದ್ದರು ಆದರೆ ಲಿಖಿತ ಆದೇಶವನ್ನು ನಂತರ ಅದೇ ತಿಂಗಳಿನಲ್ಲಿ ಕೊಟ್ಟಿದ್ದಾರೆ. ದಿನಾಂಕ 16.09.2013 ರಂದು ನಾನು ದೂರು ಕೊಟ್ಟಾಗ ಹಾಲಿನ ಪುಡಿ ಸರಬರಾಜು ಮಾಡಲು ನನ್ನ ಬಳಿ ಯಾವುದೇ ಲಿಖಿತ ಆದೇಶ ಇರಲಿಲ್ಲ ಎಂದರೆ ಇರಬಹುದು ಆದರೆ ಅದೇ ತಿಂಗಳಿನಲ್ಲಿ ಆದೇಶ ಕೊಟ್ಟಿದ್ದಾರೆ. ಲಿಖಿತ ಆದೇಶವನ್ನು ದಿನಾಂಕ 30.09.2013 ರಂದು ಕೊಟ್ಟಿದ್ದಾರೆ ಆದ್ದರಿಂದ ದಿನಾಂಕ 16.09.2013 ರಂದು ಲಿಖಿತ ಆದೇಶ ನನಗೆ ಇರಲಿಲ್ಲ ಎಂದರೆ ಹೌದು .

7. ನಾನು ಕೊಟ್ಟಿರುವ ಫಿರ್ಯಾದನ್ನು ಲೋಕಾಯುಕ್ತ ಪೊಲೀಸ್ ನವರು ನಾನು ಹೇಳಿದ ರೀತಿ ಬರೆದಿದ್ದಾರೆ . ಅದಕ್ಕೆ ಮೊದಲು ನಾನೇ ಒಂದು ದೂರನ್ನು ಲೋಕಾಯುಕ್ತ ಪೊಲೀಸ್ ನವರಿಗೆ ಬರೆದುಕೊಟ್ಟಿದ್ದೇನೆ ನಂತರ ಅವರೂ ಸಹ ಬರೆದಿದ್ದಾರೆ. ಎರಡೂ ದೂರಿಗೆ

ಸಹಿ ಮಾಡಿದ್ದೇನಾ ಎಂದು ನೆನಪಿಲ್ಲ. ಲೋಕಾಯುಕ್ತ ಪೊಲೀಸ್ ನವರ ಮುಂದೆ ನಾನು ಬರೆದುಕೊಟ್ಟ ಒಂದು ದೂರು ಮತ್ತು ಅವರು ಬರೆದುಕೊಂಡ ಮತ್ತೊಂದು ದೂರು ಸೇರಿ ಎರಡು ದೂರು ಕೊಟ್ಟಿದ್ದೇನೆ ಎಂದು ಹೇಳಿದ್ದೆನಾ ಎಂದು ನೆನಪಿಲ್ಲ. ಯಾವುದೇ ಕಾಗದಕ್ಕೆ ಸಹಿ ಮಾಡಬೇಕಾದರೆ ನಾನು ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ. ಯಾವುದೇ ಸರ್ಕಾರಿ ಅಧಿಕಾರಿಗಳ ಮುಂದೆ ಸುಳ್ಳು ಸಂಗತಿ ಬರೆದಿರುವ ದಾಖಲಾತಿಯನ್ನು ಕೊಡಬಾರದು ಎಂದು ನನಗೆ ಗೊತ್ತಿದೆ . ಈಗ ತೋರಿಸಿದ ನಿ.ಪಿ. 3 ನಾನು ಬರೆದುಕೊಟ್ಟ ದೂರು ಆಗಿದೆಯಾ ಅಥವಾ ಲೋಕಾಯುಕ್ತ ಪೊಲೀಸ್ ನವರು ಬರೆದುಕೊಂಡ ದೂರಿಗೆ ನಾನು ರುಜು ಹಾಕಿದ್ದೆನಾ ಎಂದರೆ ಅದು ನಾನೇ ಕೊಟ್ಟ ದೂರು ಆಗಿದೆ ಅದರಲ್ಲಿ ನನ್ನ ರುಜು ಇದೆ. ನಾನು ಲೇಖನಿಯಲ್ಲಿ ಬರೆದು ಬೇರೊಂದು ದೂರನ್ನು ಕೊಟ್ಟಿದ್ದೆನಾ ಎಂದು ನೆನಪಿಲ್ಲ. ನಿ.ಪಿ. 3 ರಲ್ಲಿ ದಿನಾಂಕ 21.08.2013 ರಲ್ಲಿ ತಾತ್ಕಾಲಿಕ ಗುತ್ತಿಗೆ ಆದೇಶ ನೀಡಿದಂತೆ ಎಂದು ಬರೆದಿದ್ದೇನೆ ಎಂದರೆ ಹೌದು . ದಿನಾಂಕ 21.08.2013 ರ ತಾತ್ಕಾಲಿಕ ಗುತ್ತಿಗೆ ಆದೇಶದ ಪ್ರತಿಯನ್ನು ಲೋಕಾಯುಕ್ತ ಪೊಲೀಸ್ ನವರಿಗೆ ನಾನು ಆ ದೂರು ಕೊಟ್ಟಾಗ ಕೊಟ್ಟಿಲ್ಲ . ದಿನಾಂಕ 30.09.2013 ರಂದು ಲಿಖಿತ ಆದೇಶ ಬಂದ ಮೇಲೆ ಅದನ್ನು ಕೊಟ್ಟಿರುತ್ತೇನೆ. ದಿನಾಂಕ 21.08.2013 ರಲ್ಲಿ ಹಾಲಿನ ಪುಡಿ ಸರಬರಾಜು ಮಾಡಲು ನನಗೆ ಬಂದಿದೆ ಎಂದು ಹೇಳಿರುವ ತಾತ್ಕಾಲಿಕ ಆದೇಶ ನನ್ನ ಬಳಿ ಇದೆಯಾ ಎಂದರೆ ನೆನಪಿಲ್ಲ.

(ಈ ಹಂತದಲ್ಲಿ ನ್ಯಾಯಾಲಯದ ಸಮಯಾವಕಾಶ ಮುಗಿದಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ